ಹಿರಿಯ ಸಿವಿಲ್ ಜಡ್ಜ್‌ಮತ್ತು ಜೆ. ಎಂ. ಎಫ್.ಸಿ., ನ್ಯಾಯಾಲಯ ಚನ್ನಪಟ್ಟಣ
ಚನ್ನಪಟ್ಟಣ.

<u>ಸಿ.ಸಿ. ಸಂಖ್ಯೆಃ**173/2017**</u>

ಚಾಸಾಃ 7 ಫ್ರಾಸಾಃ 6

| | | |
|---|---|---|
| ಹೆಸರು | : | ಡಾ. ಮಹೇಂದ್ರ ಕುಮಾರ್ |
| ಗಂಡನ/ತಂದೆಯ ಹೆಸರು | : | ಡಾ. ತಾನಯ್ಯ |
| ವಯಸ್ಸು | : | 51 ವರ್ಷ |
| ಉದ್ಯೋಗ | : | ಜನರಲ್ ಸರ್ಜನ್<br>ಚನ್ನಪಟ್ಟಣ ಸರ್ಕಾರಿ ಆಸ್ಪತ್ರೆ |
| ವಾಸ | : | ರಾಮನಗರ |

<u>ದಿನಾಂಕ **03.12.2024** ರಂದು ಸಾಕ್ಷಿಯನ್ನು ಕರೆಸಲಾಯಿತು. ಪ್ರಮಾಣವಚನ ಬೋಧಿಸಲಾಯಿತು.</u>

<u>ಮುಖ್ಯವಿಚಾರಣೆಃ ಮಾನ್ಯ ಎಪಿಪಿ ಯವರಿಂದಃ</u>

ನಾನು ***2015*** ರಿಂದ ಇಲ್ಲಿಯವರೆಗೆ ಚನ್ನಪಟ್ಟಣ ಸರ್ಕಾರಿ ಆಸ್ಪತ್ರೆಯಲ್ಲಿ ಜನರಲ್ ಸರ್ಜನ್ ಕೆಲಸ ಮಾಡುತ್ತಿದ್ದೇನೆ.

ದಿಃ***07.01.2016*** ರಂದು ಚಾಸಾ-***2*** ರವರು ***1*** ನೇ ಆರೋಪಿಯಿಂದ ಕೈ ಮತ್ತು ದೊಣ್ಣೆಯಿಂದ ಹಲ್ಲೆಯ ಹಿನ್ನಲೆಯಲ್ಲಿ ಚಿಕಿತ್ಸೆಗಾಗಿ ನಮ್ಮ ಆಸ್ಪತ್ರೆಗೆ ಸುಮಾರು ಬೆಳಗ್ಗೆ ***11.00*** ಗಂಟೆಗೆ ಬಂದಿರುತ್ತಾರೆ. ಅವರನ್ನು ಪರೀಕ್ಷಿಸಿದಾಗ ಈ ಕೆಳಕಂಡ ಗಾಯಗಳು ಕಂಡು ಬಂದಿರುತ್ತದೆ.

***1.*** ಬಲ ಮುಂಗೈ ನ ಒಳಭಾಗದಲ್ಲಿ ***3*** **x 3** ಸೆಂ ಮೀ ಅಳತೆಯುಳ್ಳ ತರಚಿದ ಗಾಯ ಕಂಡು ಬಂದಿರುತ್ತದೆ.

***2.*** ಬಲಕೆನ್ನೆಯ ಮೇಲೆ ***3*** **x 2** ಸೆಂ ಮೀ ಅಳತೆಯುಳ್ಳ ತರಚಿದ ಗಾಯ ಕಂಡು ಬಂದಿರುತ್ತದೆ.

***3.*** ಎಡ ಮಂಡಿಯ ಮೇಲ್ಬಾಗದಲ್ಲಿ ಮುಟ್ಟಿದಾಗ ನೋವು ಕಂಡು ಬಂದಿರುತ್ತದೆ.

ನಾನು ಅವರಿಗೆ ಚಿಕಿತ್ಸೆಯನ್ನು ನೀಡಿರುತ್ತೇನೆ. ನನ್ನ ಅಭಿಪ್ರಾಯದಲ್ಲಿ ಈ ಗಾಯಗಳು ಸಾಮಾನ್ಯ ಸ್ವರೂಪದ ಗಾಯಗಳಾಗಿರುತ್ತದೆ.ಈ ಬಗ್ಗೆ ನಾನು ಗಾಯದ ಪ್ರಮಾಣ ಪತ್ರವನ್ನು ನೀಡಿದ್ದು ಅದನ್ನು ಈಗಾಗಲೇ ನಿಪಿ*5* ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ನನ್ನ ಸಹಿಯನ್ನು ನಿಪಿ-*5(*ಎ*)* ಎಂದು ಗುರುತಿಸಲಾಯಿತು. ಚಾಸಾ*2* ರವರು ಹೇಳಿದಂತೆ ಕೈ ಹಾಗೂ ದೊಣ್ಣೆಯಿಂದ ಹೊಡೆದಾಗ ಮೇಲ್ಕಂಡ ಗಾಯಗಳು ಆಗುವ ಸಾಧ್ಯತೆ ಇರುತ್ತದೆ.

<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಂ ಆರ್ ಎಸ್ ವಕೀಲರಿಂದಃ</u>

ಒಬ್ಬ ವ್ಯಕ್ತಿ ನಡೆದುಕೊಂಡು ಹೋಗುವಾಗ ಸೋಡಾ ಬಾಟಲಿನ ಮುಚ್ಚುಳದ ಮೇಲೆ ಬಿದ್ದಾಗ ಮೇಲೆ ಹೇಳಿದ ಗಾಯಗಳು ಆಗುವ ಸಾಧ್ಯತೆ ಇದೆ ಎಂದರೆ ಸಾಕ್ಷಿಯು *1* ನೇ ಗಾಯ ಆಗುವುದು, *2* ಮತ್ತು *3* ನೇ ಗಾಯಗಳು ಆಗುವ ಸಾಧ್ಯತೆ ಕಡಿಮೆ ಎಂದು ನುಡಿಯುತ್ತಾರೆ. ಒಬ್ಬ ವ್ಯಕ್ತಿ ಜೋರಾಗಿ ನಡೆದುಕೊಂಡು ಹೋಗಿ ಬಿದ್ದಾಗ ಹೇಳಿದ ಗಾಯಗಳು ಆಗುವ ಸಾಧ್ಯತೆ ಇದೆ ಎಂದರೆ ಸಾಕ್ಷಿಯು *2* ಮತ್ತು *3* ನೇ ಗಾಯಗಳು ಆಗುವ ಸಾಧ್ಯತೆ ಕಡಿಮೆ ಎಂದು ನುಡಿಯುತ್ತಾರೆ.

<u>ಮರುವಿಚಾರಣೆಃ ಇಲ್ಲ</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)**Na**

ಓ.ಹೇ.ಕೇ.ಸ.ಒ

(ವೆಂಕಟೇಶಪ್ಪ. ವಿ)
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.